

ಎಡದಿಂದ ಬಲಕ್ಕೆ :
1. ಪ್ರತಿ ವಸ್ತುವಿನ ಬೆಲೆಯೂ ಹೆಚ್ಚಿರುವುದು ಪ್ರಸ್ತುತದ ಸತ್ಯ (3)
2. ಅಡಿಗೆಗೆಂದು ತಂದದ್ದನ್ನೆಲ್ಲ ಮಾರಿದ ಸ್ಥಳ ಯಾವುದು ? (3)
4. ಒಳ್ಳೆಯ ಸಂಗೀತಗಾರ್ತಿ, ಆಕೆಯ ಜೊತೆಗಾತಿ (3)
6. ಕತ್ತೆಯನ್ನೇ ಓಡಿಸಿದರೂ ಕುದುರೆಯ ಕೂಗು ಹೇಗೆ ? (3)
7. ಮಡಿಕೆಗಳನ್ನೆಲ್ಲ ತುಂಬಿಟ್ಟಿರುವುದು ಕೊನೆಯ ಗೃಹ (4)
9. ಮುನಿದವರು ಕೂಗಾಡಿದ್ದೇ ಹಿಂದಿರುಗಿ ಕೇಳಿಸಿತೇ ? (4)
11. ಪುಳಕಿತರಾಗುವಂತೆ ಮಾಡಿದ್ದು ಗಾಢವಲ್ಲದ ವಾಸನೆ (4)
13. ಮುನಿಯನ್ನು ಕಂಡೊಡನೆ ಅರಳಿದ ಚಿತ್ರ ಎಷ್ಟು ಸುಂದರ ! (4)
15. ಶಾಂತಕ್ಕಳ ವಯೋಮಾನ ತಲುಪಿತು ನೂರು ವರ್ಷ (3)
17. ನಿರ್ಮಲ ಮನದ ಚಿಂತನಗಳೆಲ್ಲ ಹೇಳ ಹೆಸರಿಲ್ಲ (3)
18. ಕಾರಿನಡಿ ಹಿಂದುಮುಂದು ಕಂಬಳಿಹೊದ್ದ ಪ್ರಾಣಿ (3)
19. ಮಲ್ಲಿಗೆಯನ್ನು ಕಂಡೊಡನೆ ಭಾರೀ ಸಂತಸ (3)

ಮೇಲಿಂದ ಕೆಳಕ್ಕೆ ;
1. ಕವಡೆ ಶಾಸ್ತ್ರ ಕೇಳುವುದು ಆ ಜನರ ರೂಢಿ (3)
2. ಸಂವತ್ಸರದಾರಂಭದಲ್ಲಿ ಋತುಗಳ ರಾಜ (3)
3. ಆತ್ಮದ ಕಲ್ಪನೆಗಳಲ್ಲೆಲ್ಲ ಇದೇ ಕೊನೆಯದು (3)
5. ಪ್ರತಿ ಮಾತನ್ನೂ ಮೀರಿ ನಡೆವಷ್ಟು ಸೊಕ್ಕು, ಗರ್ವ (3)
7. ಕ್ರಮವರಿತು ಕಲಿತರಷ್ಟೇ ಕೈಗೂಡಬಹುದು ಇಂಥ ಕೈಚಳಕ (4)
8. ನಾಡಿನ ಮಧ್ಯೆ ಪತ್ತೆಯಾದದ್ದು ನೆಟ್ಟು ಬೆಳೆಸಿದ ವೃಕ್ಷರಾಶಿ (4)
9. ಮತ್ತದೇ ಲೆಕ್ಕಕ್ಕೆ ಬಂತು ಭೂಮಿ (4)
10. ವ್ಯಾಪಾರವನ್ನು ನಿಲ್ಲಿಸದೆ ಬೇರೆ ತಂತ್ರವೇ ಇಲ್ಲ (4)
12. ಕಂಬಿಯನ್ನೆಣಿಸಬೇಕಾಯಿತೆಂದು ದುಃಖ, ಕಣ್ಣೀರು (3)
14. ಮೂರ್ಖರ ಬವಣೆ ಕಂಡು ಕನಿಕರ (3)
15. ಮನುಷ್ಯನ ದುರಾಸೆಯ ಖಾಯಿಲೆಗೆ ಪರಿಹಾರ ಸಿಕ್ಕೀತೇ? (3)
16. ಕಾಡಿನ ಮಹಿಮೆ, ಎಷ್ಟು ಬಣ್ಣಿಸಿದರೂ ಹೆಚ್ಚಲ್ಲ (3)

## 02-2-2017ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅನಿಶ್ಚಿತ 3. ನಿರಭ್ರ 4. ವಣಿಕ 6. ಕಷ್ಟಕರ 7. ವಿಜಯ
9. ಅಶನ 11. ದಮನ 13. ನಜರು 15. ಸಮಬಲ 17. ಕುಶಲ
18. ಸಿಸಿರ (= ಶಿಶಿರ) 19. ಹೆಗ್ಗಳಿಕೆ

ಮೇಲಿಂದ ಕೆಳಕ್ಕೆ :
1. ಅಭ್ರಕ 2. ತವರ 3. ನಿರ್ವ್ಯಾಜ 5. ಕರ್ಕಶ 7. ವಿವಾದ
8. ಯಜನ 9. ಅಧೀನ 10. ನವಿರು 12. ಮಸುಕು 14. ಜವರ
15. ಸಲಹೆ 16. ಲಸಿಕೆ

# ಪ್ರಶ್ನಾಂಕಣ

## ಪ್ಯಾಂಗೋಲಿನ್: ಏನು ವಿಶೇಷ?

ಪ್ಯಾಂಗೋಲಿನ್ ಅದೊಂದು ವಿಚಿತ್ರ ರೂಪದ ವಿಶಿಷ್ಟ ಪ್ರಾಣಿ (ಚಿತ್ರ 1, 2) ಬಹು ಸಂಖ್ಯೆಯ ಗಟ್ಟಿ ಚಿಪ್ಪುಗಳನ್ನು ಸೇರಿಸಿ, ಜೋಡಿಸಿ ಹೆಣೆದು ಹೊದಿಸಿದಂತಹ ದೃಢ ಕವಚವನ್ನು ಪಡೆದಿರುವುದು ಈ ಪ್ರಾಣಿಯ ಮೊದಲ ವಿಶೇಷ. ಶರೀರದ ತಳ ಭಾಗವನ್ನು ಬಿಟ್ಟು ಉಳಿದಂತೆ ಎಲ್ಲೆಡೆ ತಲೆಯಿಂದ ಬಾಲದ ತುದಿವರೆಗೆ ಆವರಿಸಿರುವ ಈ ಕವಚವನ್ನು ತೊಟ್ಟಿರುವ ಪ್ಯಾಂಗೋಲಿನ್ ಮೇಲ್ನೋಟಕ್ಕೆ ಸರೀಸೃಪದಂತೆ ಕಂಡರೂ ವಾಸ್ತವವಾಗಿ ಅದು ಸ್ತನಿ ವರ್ಗಕ್ಕೆ ಸೇರಿದೆ. ಬಹುಪಾಲು ದೇಹದಷ್ಟೇ ಉದ್ದದ ಅಂಟು ಅಂಟಾದ ನಾಲಿಗೆಯ ಈ ಪ್ರಾಣಿಗೆ ಇರುವೆ ಮತ್ತು ಗೆದ್ದಲುಗಳೇ ಆಹಾರ. ಅಪಾಯ ಎದುರಾದೊಡನೆ, ಶತ್ರು ಕಂಡೊಡನೆ ತಲೆಯನ್ನು ಹುದುಗಿಸಿ ಗುಂಡಾಗಿ ಕಲ್ಲಿನ ಚೆಂಡಿನಂತಾಗುವುದು ಅದರ ಸ್ವರಕ್ಷಣಾ ಕ್ರಮ. ಹಾಗಿದ್ದಾಗ ಕಚ್ಚಿ, ಚುಚ್ಚಿ ಅಥವಾ ಯಾವುದೇ ರೀತಿಯ ಬಲ ಪ್ರಯೋಗಿಸಿ ಅದರ ವಜ್ರ ಕವಚವನ್ನು ತೆರೆಯುವುದು ಸಿಂಹ, ಚಿರತೆಗಳಂತಹ ಬಲಿಷ್ಠ ಬೇಟೆಗಾರರಿಗೂ ಸಾಧ್ಯವಿಲ್ಲ. ಪ್ಯಾಂಗೋಲಿನ್ ಗಳಲ್ಲಿ ಪ್ರಸ್ತುತ ಎಂಟು ಪ್ರಭೇದಗಳಿವೆ. ಭಾರತವೂ ಸೇರಿದಂತೆ ಏಷಿಯದಲ್ಲಿನಾಲ್ಕು ಮತ್ತು ಆಫ್ರಿಕದಲ್ಲಿ ನಾಲ್ಕು. ಎರಡರಿಂದ ಮೂವತ್ತು ಕಿಲೊ ತೂಕ ಮುಟ್ಟುವ ಈ ಪ್ರಾಣಿಯ ಗರಿಷ್ಠ ಆಯುಷ್ಯ 20 ವರ್ಷ.

ಆದರೆ, ವಿಪರ್ಯಾಸ ಏನೆಂದರೆ, ಅಷ್ಟು ಭದ್ರ ಕವಚ ತೊಟ್ಟಿದ್ದರೂ, ತುಂಬ ಸಾಧು ಸ್ವಭಾವವನ್ನೇ ಪಡೆದಿದ್ದರೂ, ಸಂಪೂರ್ಣ ನಿಶಾಚರ ಪ್ರಾಣಿಯೇ ಅಗಿದ್ದರೂ ಕೂಡ ಪ್ಯಾಂಗೋಲಿನ್ ಗಳ ಎಲ್ಲ ಪ್ರಭೇದಗಳೂ ಅಳಿದು ಹೋಗುವ ಅಪಾಯದಲ್ಲಿರುವುದು ಮತ್ತೊಂದು ವಿಶೇಷ. ಕೇವಲ ಮನುಷ್ಯರ ನಿರಂತರ ಕಳ್ಳಬೇಟೆಯಿಂದಾಗಿ ಪ್ಯಾಂಗೋಲಿನ್ ಗಳು ಈ ದುಸ್ಥಿತಿಯನ್ನು ತಲುಪಿವೆ. ವಾಸ್ತವ ಏನೆಂದರೆ ಜಗದಾದ್ಯಂತ ಗುಟ್ಟಾಗಿ



ನಡೆಯುತ್ತಿರುವ ವನ್ಯಜೀವಿಗಳ ಕಳ್ಳ ಮಾರುಕಟ್ಟೆಯಲ್ಲಿ ಈ ಪ್ರಾಣಿಯದೇ ಗರಿಷ್ಠ ಭಾಗ; ಶೇಕಡ 20 ರಷ್ಟು ಭಾಗ. ಇನ್ನೂ ಸ್ಪಷ್ಟವಾಗಿ ಹೇಳ ಬೇಕೆಂದರೆ ಪ್ರತಿವರ್ಷ ಸರಾಸರಿ ಕನಿಷ್ಠ ಒಂದು ಲಕ್ಷ ಪ್ಯಾಂಗೋಲಿನ್ ಗಳು ಕಳ್ಳ ಬೇಟೆಗೆ ಗುರಿಯಾಗಿ, ಸೆರೆಯಾಗಿ ಪ್ರಾಣ ಬಿಡುತ್ತಿರುವುದು ಪತ್ತೆಯಾಗುತ್ತಿದೆ. ಪತ್ತೆಯಾಗದ ಸಂಖ್ಯೆ ಅದಕ್ಕಿಂತ ಬಹಳ ಅಧಿಕ.

ಪ್ಯಾಂಗೋಲಿನ್ ಗಳ ಈ ದಾರುಣ ಸ್ಥಿತಿಗೆ ಎರಡು ಕಾರಣಗಳಿವೆ. ವಿಶೇಷವಾಗಿ ಚೀನಾ ಮತ್ತು ವಿಯಟ್ನಾಮ್ ದೇಶಗಳಲ್ಲಿ ಈ ಪ್ರಾಣಿಯ ಬಗೆಗೆ ಹಲವಾರು ಗಾಢ ಮೂಢ ನಂಬಿಕೆಗಳಿವೆ. ಪ್ಯಾಂಗೋಲಿನ್ ಕವಚದ ಚಕ್ಕೆಗಳ ಹುರಿದ ಪುಡಿ ಮತ್ತು ಭಟ್ಟಿ ಇಳಿಸಿದ ಕಷಾಯ ನಾನಾ ಕಾಯಿಲೆಗಳಿಗೆ, ಉದಾಹರಣೆಗೆ ದೀರ್ಘಕಾಲದ ನೋವು, ಗೂರಲು, ವಾತಜ್ವರ, ಸಂಧಿವಾತ, ಅಂಗಾಂಗ ದೌರ್ಬಲ್ಯ, ನರರೋಗಗಳು ಮತ್ತು ಕ್ಯಾನ್ಸರ್ ಗೂ ಕೂಡ ದಿವ್ಯೌಷಧಗಳೆಂಬ ನಂಬಿಕೆ ಅಲ್ಲಿ ವ್ಯಾಪಕವಾಗಿದೆ. ಹಾಗಾಗಿ ಪ್ಯಾಂಗೋಲಿನ್ ಕವಚದ ಚಕ್ಕೆಗಳು ಪ್ರತಿ ಕಿಲೋ ಗೆ ಎರಡು ಲಕ್ಷ ರೂ. ಬೆಲೆ ಹೊಂದಿವೆ! ಇದರ ಜೊತೆಗೆ ವನ್ಯ ಮಾಂಸ ಭಕ್ಷಿಸುವ ವಿಕೃತ ಆಸೆಯ ದುಷ್ಟ ಜನರ ಜಿಹ್ವಾ ಚಾಪಲ್ಯಕ್ಕೂ ಈ ಪ್ರಾಣಿಗಳು ಬಲಿಯಾಗುತ್ತಿವೆ. ಅದಕ್ಕಾಗಿ ಜೀವಂತವಾಗಿ ಅಥವಾ ತುಂಡು ತುಂಡು ಮಾಡಿ ಗುಟ್ಟಾಗಿ ಸಾಗಣೆಗೊಂಡು ಮಾರಲ್ಪಡುವ ಈ ಪ್ರಾಣಿಯ (ಚಿತ್ರ 3, 4) ಮಾಂಸಕ್ಕೆ ಪ್ರತಿ ಕಿಲೋ ಗ್ರಾಂಗೆ 25,000 ರೂ ಬೆಲೆ ಇದೆ. ಹಾಗೆಲ್ಲ ಆಗಿ ಸರ್ವನಾಶದ ಹಾದಿಯಲ್ಲಿರುವುದು ಪ್ಯಾಂಗೋಲಿನ್ ನ ಅಂತಿಮ ವಿಶೇಷ.

■ ಎನ್. ವಾಸುದೇವ್